

# ಸಾಟಿಯೆಲ್ಲಿದೆ ಪಟೋಲ ಸೀರೆಗೆ..?

ಗುಜರಾತ್‌ನ ಪಟೋಲ ಸೀರೆ ಬಹಳ ಹೆಸರುವಾಸಿ. ಅಂದ, ವಿನ್ಯಾಸ, ಬಣ್ಣ ಎಲ್ಲದರಲ್ಲೂ ಆತ್ಯಾಕರ್ಷಕ ವಾಗಿರುವ ಈ ಸೀರೆ ಸೀರೆ ಪ್ರಿಯರು ತಮ್ಮ ಸಂಗ್ರಹಕ್ಕೆ ಸೇರಿಸಿಕೊಳ್ಳಲೇಬೇಕಾದ ಸೀರೆ. ಆದರೆ ಇದು ಬಹಳ ದುಬಾರಿ. ಬಾಳಿಕೆಯೂ ದೀರ್ಘಕಾಲ ಬರುತ್ತದೆ.

■ ಜಯಶ್ರೀ ಕಾಲ್ಕುಂದ್ರಿ

ಸೀರೆ ಕಾಟನ್ ಆಗಿರಲಿ, ರೇಷ್ಮೆಯೇ ಆಗಿರಲಿ, ಸಿಂಥೆಟಿಕ್ ದ್ದೇ ಆಗಿರಲಿ.. ಯಾವುದೇ ಪ್ರಕಾರದ್ದು ಉಟ್ಟರೂ ಲಕ್ಷಣವಾಗಿ ಕಾಣುತ್ತಾಳೆ ಮಹಿಳೆ. ಸೀರೆಯುಟ್ಟು ನೆರಿಗೆ ಚಿಮ್ಮುತ್ತ ಬರುತ್ತಿರುವ ನಾರಿಯೇ ಗೌರವಕ್ಕೆ ಪಾತ್ರಳು ಎಂಬುದು ಹೆಣ್ಣಿನ ಬಗೆಗಿನ ಸಾಮಾನ್ಯ ಮಾತು. ನಮ್ಮ ದೇಶೀಯ ಸಂಸ್ಕೃತಿಯ ಜೀವಾಳವೆನಿಸಿರುವ ಸೀರೆ, ವೇದಕಾಲಗಳಿಂದಲೂ ಹೆಂಗಳೆಯರನ್ನು ಸೆಳೆಯುತ್ತಲೇ ಇದೆ. ನಾರಿಗೆ ಸೀರೆಯಷ್ಟು ಮೆರಗು ನೀಡುವ ಬೇರಾವ ಉಡುಗೆ ತೊಡುಗೆಗಳೂ ಇಲ್ಲವೆಂಬ ಮಾತನ್ನು ಫ್ಯಾಷನ್ ಡಿಸೈನರುಗಳೂ ಒಪ್ಪುತ್ತಾರೆ. ಹಬ್ಬದ ಸಂಭ್ರಮಕ್ಕಂತೂ ರೇಷ್ಮೆಯ ಸೀರೆಯೇ ಸರಿಯಾದ ಉಡುಗೆ. ರೇಷ್ಮೆ ಸೀರೆಗಳಲ್ಲಿ, ಕಿರೀಟ ಹಾಕದೆ, ರಾಣಿಯಂತೆ ಬೀಗುವ ಗುಜರಾತಿನ ಪಟೋಲ ಸೀರೆಯೂ ಒಂದು.

## ಏನಿದು ಪಟೋಲ ಸೀರೆ?

ಗುಜರಾತಿನ ಮೆಹಸಾನಾ ಜಿಲ್ಲೆಯ ಪಾಟನ್ ಪಟೋಲ ಸೀರೆ ಅಂದಕ್ಕೆ, ಬಾಳಿಕೆಗೆ ಹೆಸರುವಾಸಿ. ಗುಜರಾತಿ ಮಹಿಳೆಯರು, ತಮ್ಮ ಸೀರೆಗಳ ಸಂಗ್ರಹದಲ್ಲಿ ಒಂದಾದರೂ ಪಟೋಲ ಸೀರೆಯಿರಲಿ ಎಂದು ಬಯಸುತ್ತಾರೆ. ಪಟ್ ಎಂದರೆ ರೇಷ್ಮೆ ವಸ್ತ್ರ. ಪಟೋಲ ಎಂದರೆ ಒಂದು ಪ್ರಕಾರದ ರೇಷ್ಮೆ ವಸ್ತ್ರ. ಪಟೋಲ ಸೀರೆಗಳು ಯಾವುದೇ ಮಧ್ಯವರ್ತಿಯ ಬಳಿಯಲ್ಲಾಗಲೀ ಮಳಿಗೆ ಇಲ್ಲವೇ ಶೋರೂಮ್‌ಗಳಲ್ಲಾಗಲೀ ಸಿಗದು. ಸುಮಾರು 900ವರ್ಷಗಳಕ್ಕೂ ಮುಂಚೆ, ಮಹಾರಾಜಾ ಕುಮಾರ್ಪಾಲ್, ಪಟಾನ್ ಪ್ರಾಂತ್ಯವನ್ನು ಆಳುತ್ತಿರುವಾಗಲೇ ಪಟೋಲಾ ಸೀರೆ, ಸಾಟಿಯಿಲ್ಲದ ಇಕಾಟ್ ನೇಯ್ಗೆಗೆ ಹೆಸರುವಾಸಿ ಯಾಗಿತ್ತು. 12ನೆಯ ಶತಮಾನದಲ್ಲಿ, ಸಾಲ್ವಿ ಧರ್ಮವನ್ನು ಅನುಸರಿಸುತ್ತಿದ್ದ ಹಲವಾರು ನೇಕಾರರ ಕುಟುಂಬಗಳು ಕರ್ನಾಟಕ ಹಾಗೂ ಮಹಾರಾಷ್ಟ್ರಗಳಿಂದ ಗುಜರಾತಿಗೆ ವಲಸೆ ಹೋಗಿ ರಾಜಾ ಕುಮಾರಪಾಲ್‌ನ ಆಶ್ರಯದಲ್ಲಿ ನೆಲೆಸಿವೆ. ಯಂತ್ರಗಳಿಗೂ ಸಡ್ಡು ಹೊಡೆಯುವ, ಮಾನವನ ಅತ್ಯದ್ಭುತ ಕಲ್ಪನಾ ಶಕ್ತಿ, ಆವಿಷ್ಕಾರಗಳ ಜೊತೆ ಜೊತೆಗೆ ಭಾರತದ ಶ್ರೀಮಂತ ಪರಂಪರೆಯನ್ನು ಉಳಿಸಿ ಬೆಳೆಸುವುದೇ ನಮ್ಮ ಆದ್ಯತೆ ಎನ್ನುತ್ತಾರೆ ಪಟೋಲ ಪ್ರೆವೇಟ್ ಲಿಮಿಟೆಡ್‌ನ ಮಾಲಿಕ ಹಾಗೂ ಸಾಲ್ವಿ ವಂಶಜರಾದ ಮೆಹುಲ್ ಸಾಲ್ವಿ.

ಇಕತ್ ಎಂದರೆ ಸೀರೆಯ ಎರಡು ಪಾರ್ಶ್ವಗಳಲ್ಲಿಯೂ  ಸಮನಾಗಿ ಬಣ್ಣ ತುಂಬುವ ಹಾಗೂ ನಿಮಗಿಷ್ಟವಾಗುವ ಚಿತ್ರ, ವಿನ್ಯಾಸಗಳನ್ನು ಬಿಡಿಸುವ ತಂತ್ರ. ಅಚ್ಚರಿಯ ವಿಷಯವೆಂದರೆ ಸೀರೆ ಉಡುವ ಮಹಿಳೆ ಯಾವ ತುದಿಯಿಂದ ಆರಂಭಿಸಲಿ ಎಂದು

